# ಸ್ಥಾವರ- ಜಂಗಮ

'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ' ಎಂಬುದು ಬಸವಣ್ಣನವರ ವಚನದಲ್ಲಿ ಬರುವ ಒಂದು ಪ್ರಸಿದ್ಧ ಹೇಳಿಕೆ. ಸ್ಥಾವರವೆಂದರೆ, ಯಾವುದೇ ಚಲನೆಯಿಲ್ಲದೆ, ಇದ್ದಲ್ಲಿಯೇ ಸ್ಥಿರವಾಗಿರುವಂಥದು, ಜಂಗಮವೆಂದರೆ ಚಲನಶೀಲವಾಗಿರುವಂಥದು– ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಸ್ಥಿರವಾಗಿರುವಂಥದು ನಾಶವಾಗುತ್ತದೆ, ಚಲನಶೀಲವಾದುದು ಶಾಶ್ವತವಾಗಿರುತ್ತದೆ ಎನ್ನುತ್ತಾರೆ ಬಸವಣ್ಣನವರು. ಸಾಧಾರಣವಾಗಿ ಲೌಕಿಕ ಜೀವನದಲ್ಲಿ ಸ್ಥಿರವಾಗಿ, ಒಂದು ಕಡೆ ನೆಲೆಗೊಳ್ಳುವುದರ ಬಗೆಗೇ ನಾವು ಗಮನ ಹರಿಸುತ್ತೇವೆ. ಎಲ್ಲೆಲ್ಲಿಯೋ ಅಲೆಯುತ್ತಿದ್ದ ವ್ಯಕ್ತಿಯೊಬ್ಬ ಸಂಸಾರಸ್ಥನಾಗಿ ಒಂದು ಕಡೆ ನಿಲ್ಲುವಂತಾದರೆ, ಆತನ ತಂದೆ ತಾಯಿಗಳಿಗೆ, ಬಂಧುಗಳಿಗೆ, ಹಿತೈಷಿಗಳಿಗೆ ನೆಮ್ಮದಿ. ಬದಲಾಗಿ, ಎಲ್ಲಿಯೂ ನೆಲಸದೆ, ಯಾವ ಉದ್ಯೋಗಕ್ಕೂ ಅಂಟಿಕೊಳ್ಳದೆ ಅಲೆಯುತ್ತಿದ್ದರೆ, ಆತನನ್ನು ಅಲೆಮಾರಿ, ಅಪ್ರಯೋಜಕ, ಜವಾಬ್ದಾರಿಯಿಲ್ಲದವನು– ಎಂದೆಲ್ಲಾ ಕರೆಯುತ್ತೇವೆ. 'ರೋಲಿಂಗ್ ಸ್ಟೋನ್ ಗ್ಯಾದರ್ಸ್ ನೋ ಮಾಸ್' ಎಂಬ ಗಾದೆಯೂ ಇದನ್ನೇ ಧ್ವನಿಸುತ್ತದೆ. ಲೌಕಿಕ ದೃಷ್ಟಿಯಿಂದ ಬದುಕಿನಲ್ಲಿ ಯಶಸ್ಸು ಬರುವುದು ಸ್ಥಾವರ ಸ್ಥಿತಿಯಿಂದ. ಆದರೆ ತಾತ್ವಿಕ ದೃಷ್ಟಿಯಿಂದ ಹೇಳುವುದಾದರೆ ಸ್ಥಾವರ ಸ್ಥಿತಿ ಜಡತೆಗೆ ಕಾರಣವಾದುದು; ಜಂಗಮ ಸ್ಥಿತಿ ವಿಕಾಸಮುಖಿಯಾದುದು.

ಯಾವುದೇ ತತ್ತ್ವವನ್ನು ಸಾಂಸ್ಥೀಕರಣಗೊಳಿಸಿದಾಗ, ಅದು ಸ್ಥಾವರವಾಗಿ ಬಿಡುತ್ತದೆ. ಅದರ ಸುತ್ತ ಕಟ್ಟುಕಟ್ಟಳೆಗಳ ಆಚರಣೆ ಸಂಪ್ರದಾಯಗಳ ಗಡಿ ಬೇಲಿಗಳು ಹುಟ್ಟಿಕೊಳ್ಳುತ್ತವೆ. ಬಾಹ್ಯಾಚರಣೆಗೇ ಪ್ರಾಶಸ್ತ್ಯ ಸಿಕ್ಕು, ಮೂಲ ತತ್ತ್ವ ಮೂಲೆಗುಂಪಾಗುತ್ತದೆ. ಮತಗಳು ಮಠಗಳಾಗಿ ಪರಿವರ್ತನೆಗೊಂಡಾಗ ಆಗುವುದು ಹೀಗೆ. ಆದರೆ ಯಾವ ಸ್ಥಾವರ ಸ್ಥಿತಿಯನ್ನೂ ಸ್ವೀಕರಿಸದ ಮುಕ್ತ ಪ್ರಜ್ಞೆ ಎಂದಿಗೂ ನಿಂತ ನೀರಿನಂತೆ ಕೊಳೆಯುವುದಿಲ್ಲ. ಅಂಥ ಮನಸ್ಸು ಎಲ್ಲ ಕದಗಳನ್ನೂ ತೆರೆದಿಟ್ಟು, ಎಲ್ಲ ದಿಕ್ಕುಗಳಿಂದಲೂ ಗಾಳಿ ಬೆಳಕನ್ನು ಸ್ವಾಗತಿಸುತ್ತದೆ. 'ನೂರಾರು ಭಾವದ ಬಾವಿ, ಎತ್ತಿಕೋ ನಿನಗೆ ಬೇಕಾದಷ್ಟು ಸಿಹಿ ನೀರ' ಎಂಬ ಜಿ.ಎಸ್. ಶಿವರುದ್ರಪ್ಪನವರ ಮಾತು ಇದನ್ನೇ ಸೂಚಿಸುತ್ತದೆ.

ನಿಸರ್ಗದಲ್ಲಿ ಚಲನಶೀಲ ಪ್ರವೃತ್ತಿ ಸದಾಕಾಲ ಮಿಡಿಯುತ್ತಿರುವುದರಿಂದಲೇ ಅದು ಜೀವಂತಿಕೆಯನ್ನು ಕಾಪಾಡಿಕೊಂಡು ಬರಲು ಸಾಧ್ಯವಾಗಿರುವುದು. ಒಂದು ಪುಟ್ಟ ಬೀಜ ಮಣ್ಣಿಗೆ ಬಿದ್ದಾಗ, ಜಡವಾಗಿಯೇ ಉಳಿದರೆ, ಸ್ವಲ್ಪ ಕಾಲದಲ್ಲಿಯೇ ಮಣ್ಣಲ್ಲಿ ಮಣ್ಣಾಗಿ ನಾಶವಾಗುತ್ತದೆ. ಅದರಲ್ಲಿ ಚಲನಶೀಲ ಮಿಡಿತವಿರುವುದರಿಂದ ಅದು ಮೊಳೆತು, ಅದರ ಕಾಂಡ ಊರ್ಧ್ವ ಮುಖವಾಗಿ ಚಲಿಸುತ್ತದೆ; ಬೇರು ನೆಲದಾಳಕ್ಕೆ ಇಳಿಯುತ್ತದೆ; ಗಿಡ ಜೀವ ಚೈತನ್ಯದಿಂದ ನಳನಳಿಸುತ್ತದೆ. ಸ್ಥಾವರವಾಗಿರುವ ಬೆಟ್ಟದ ಅಂತರಂಗದಲ್ಲೂ ಚಲಿಸುವ ಆಸೆ ಸುಪ್ತವಾಗಿದೆ ಎನ್ನುತ್ತಾರೆ ಪು.ತಿ.ನ. ಆದ್ದರಿಂದಲೇ ಅವರ ದೃಷ್ಟಿಯಲ್ಲಿ ಬೆಟ್ಟದಿಂದ ಕೆಳಕ್ಕೆ ಹರಿಯುವ ಹೊನಲೆಂಬುದು– 'ಸ್ಥವಿರ ಗಿರಿಯ ಚಲನದಾಸೆ.' ಸೃಷ್ಟಿಯಲ್ಲಿ ಹೊಸ ಹೊಸ ಕನಸುಗಳು, ಹೊಸ ಹೊಸ ಆವಿಷ್ಕಾರಗಳು ಕಾಣಿಸಿಕೊಳ್ಳುತ್ತಿರುವುದು ಜಂಗಮ ಪ್ರವೃತ್ತಿಯಿಂದ. ಜೀವದ ವಿಕಾಸ ಪಥದಲ್ಲಿ ಸ್ಥಾವರ ಸ್ಥಿತಿಗೆ ಅವಕಾಶವಿಲ್ಲ. ಮಣ್ತನ, ಮರತನ, ಮಿಗತನ, ಖಗತನ– ಇತ್ಯಾದಿ ಹಂತಗಳನ್ನು ದಾಟಿ ಬಂದ ಮನುಷ್ಯ 'ನಾರಾಯಣತ್ತ್ವ'ವನ್ನು ಪಡೆಯಬೇಕಾದರೆ, ಮನುಷ್ಯ ಜಂಗಮನಾಗ ಬೇಕು. ಸಂಸಾರ, ಸಮಾಜ, ಜಾತಿ, ಮತ, ಪಂಥ ಮುಂತಾದ ಉಪಾಧಿಗಳನ್ನು ಕಳಚಿಕೊಂಡು 'ಎಲ್ಲ ತತ್ತ್ವದೆಲ್ಲೆ ಮೀರಿ, ನಿರ್ದಿಗಂತವಾಗಿ', ಅನಿಕೇತನನಾಗಿ ಮನುಷ್ಯ ಮುಂದುವರಿಯಬೇಕೆಂಬುದು ಕುವೆಂಪುರವರ ವಿಶ್ವಮಾನವ ಸಂದೇಶ. ಶ್ರೀ ಅರವಿಂದರು ತಮ್ಮ 'ಸಾವಿತ್ರೀ' ಮಹಾಕಾವ್ಯದಲ್ಲಿ ವಿಕಾಸ ಶೀಲನಾಗಿರುವ ಮನುಷ್ಯ ಪರಿಪೂರ್ಣತೆಯನ್ನು ದಕ್ಕಿಸಿಕೊಳ್ಳುತ್ತಾನೆಂಬ ದೃಢ ವಿಶ್ವಾಸವನ್ನು ಪ್ರಕಟಿಸಿದ್ದಾರೆ. 'This earthly life becomes the life divine' ಎನ್ನುತ್ತಾರೆ ಅವರು!

■ ವೈನತೇಯ

# ಮಾತೇ ಮುತ್ತು

★ ಗಂಡಸು ಮರುಮದುವೆ ಮಾಡಿಕೊಂಡರೆ ಅದು ಮೊದಲ ಹೆಂಡತಿಯನ್ನು ಪ್ರೀತಿಸುತ್ತಿದ್ದುದರಿಂದ! ಹೆಂಗಸು ಮರುಮದುವೆ ಮಾಡಿಕೊಂಡರೆ ಅವಳು ಮೊದಲ ಗಂಡನನ್ನು ದ್ವೇಷಿಸುತ್ತಿದ್ದುದರಿಂದ!

-ಆಸ್ಕರ್ ವೈಲ್ಡ್

★ ಇಬ್ಬರು ಹೆಂಗಸರು ಒಂದು ಗುಂಪು; ಮೂವರು ಒಂದು ಸಮೂಹ.

-ಹಂಗೆರಿ ಗಾದೆ

★ ಹೆಣ್ಣನ್ನು ಅಬಲೆ ಎಂದು ಕರೆಯುವುದು ನಿಂದೆ, ಅದು ಗಂಡು ಹೆಣ್ಣಿಗೆ ಮಾಡಿದ ಅನ್ಯಾಯ.

-ಮಹಾತ್ಮ ಗಾಂಧೀಜಿ

★ ಹೆಣ್ಣಿಲ್ಲದ ಮನೆ, ಹಣ್ಣಿಲ್ಲದ ಮರ.

-ಗಾದೆ

★ ಸ್ತ್ರೀಜಾಣ್ಮೆಗೆ ಇನ್ನೊಂದು ಸಾಟಿಯಿಲ್ಲ.

-ಕೆ.ವಿ.ಅಯ್ಯರ್

★ ತಮ್ಮದಾದ ಒಂದು ಸಂಸಾರ ಇಲ್ಲದಿದ್ದರೆ ಹೆಂಗಸರು ಬದುಕಿರಲಾರರು. ಗಂಡಸರು ತೇಲಿ ಹೋಗಬಹುದು, ಆದರೆ ಹೆಂಗಸರಿಗೆ ಯಾವುದಾದರೊಂದು ನೆಲೆ ಇರಲೇಬೇಕಲ್ಲ?

-ರವೀಂದ್ರನಾಥ ಠಾಕೂರ್

★ ಜಾಣ ಹೆಂಗಸರು ಯಾವಾಗಲೂ ದಡ್ಡರನ್ನೇ ಮದುವೆ ಆಗುತ್ತಾರೆ.

-ಅನತೋಲ್ ಫ್ರಾನ್ಸ್

★ ಹೆಂಗಸರನ್ನು ಅರ್ಥ ಮಾಡಿಕೊಳ್ಳಲು ಯತ್ನಿಸಬಾರದು. ಅವರ ಆಳವೇ ತಿಳಿಯುವುದಿಲ್ಲ.

-ಕೆ.ಎಂ.ಮುನ್ಷಿ

★ ಮನೆಗೆ ತಕ್ಕ ಸುಗುಣೆಯಾಗಿ ಗಂಡನ ಗಳಿಕೆಗೆ ತಕ್ಕಂತೆ ಬಾಳುವವಳೇ ಜೀವನ ಸಂಗಾತಿ.

-ತಿರುವಳ್ಳುವರ್

★ ರಾಜಕೀಯದಲ್ಲಿ ನೀವು ಏನಾದರೂ ಹೇಳಬೇಕೆಂದು ಬಯಸಿದರೆ ಪುರುಷನನ್ನು ಕೇಳಿ, ಏನಾದರೂ ಕೆಲಸ ಆಗಬೇಕೆಂದು ಬಯಸಿದಲ್ಲಿ ಮಹಿಳೆಯನ್ನು ಕೇಳಿ.

-ಮಾರ್ಗರೆಟ್ ಥ್ಯಾಚರ್

★ ನಿಮ್ಮ ಅನುಮತಿ ಇಲ್ಲದೇ ನೀವು ಕೀಳೆಂಬ ಭಾವನೆಯನ್ನು ಯಾರೂ ಮೂಡಿಸಲಾಗದು.

-ರೂಸ್‌ವೆಲ್ಟ್

★ ಕ್ಷಮಿಸುವುದು ಉತ್ತಮ, ಮರೆತುಬಿಡುವುದು ಸರ್ವೋತ್ತಮ.

-ರಾಬರ್ಟ್ ಬ್ರೌನಿಂಗ್

★ ಕೊಡ ಪೂರ್ಣ ತುಂಬಿರಬೇಕು, ಇಲ್ಲವೇ ಖಾಲಿ ಇರಬೇಕು. ಅರೆಬರೆ ತುಂಬಿದ ಕೊಡಗಳಿಂದ ಅನರ್ಥವೇ ಜಾಸ್ತಿ.

-ಅನುಭವಾಮೃತ

★ ಸದಾ ಹೊಗಳಿಕೆಗೆ ಪಾತ್ರನಾದವನಾಗಲಿ, ಸದಾ ತೆಗಳಿಕೆಗೆ ಪಾತ್ರನಾದವನಾಗಲಿ ಎಂದೂ ಇರಲಿಲ್ಲ; ಈಗ ಇಲ್ಲ, ಮುಂದೆಯೂ ಇರುವುದಿಲ್ಲ.

-ಬುದ್ಧನ ಧಮ್ಮಪದ

★ ನಿಲುವುದೆ ಸಾವು; ಚಲಿಸುವುದೆ ಬಾಳು.

-ಕುವೆಂಪು

★ ಹುಟ್ಟಿನ ಜತೆಯಲ್ಲೇ ಹೊತ್ತು ತಂದ ಹೊರೆ– ಸಾವು.

-ತರಾಸು

★ ನೀನು ಓದಿದ್ದರ ಬಗ್ಗೆ, ತಿಳಿದುಕೊಂಡದ್ದರ ಬಗ್ಗೆ ನಿಂತು ಯೋಚಿಸುವ ಅಭ್ಯಾಸ ಬೆಳೆಸಿಕೊಂಡರೆ ಮಾತ್ರ ನೀನು ಓದಿದ್ದು ನಿನ್ನ ವ್ಯಕ್ತಿತ್ವದ ಭಾಗವಾಗುತ್ತದೆ.

-ಜಾನ್ ಮಿಲ್ಟನ್

★ ಹೊಸತನವೆ ಬಾಳು; ಹಳಸಿಕೆಯೆಲ್ಲ ಸಾವು ಬಿಡು.

-ಡಿವಿಜಿ